Karnataka Civil Judge (Mains) 2018

Translation Paper · compulsory paper

Date: 14.07.2018 · Time: 10.00 AM to 1.00 PM · Max Marks: 100

Part I

1. Translate the following deposition to Kannada language: 15 Marks

Examination in Chief By APP:

CW1 is my younger sister. A1 is the husband of CW1. A2 is the younger brother of A1. A3 is the younger sister of A1. The marriage of A1 with CW1 was celebrated in the year 1994 at Peenya. At the time of marriage, A1 was working in Airport at Mumbai. A1 and CW1 were living happily till they got second child. CW1 has come to her parents house at Peenya for second delivery. Thereafter, CW1 was residing at Adugodi in the house arranged by A1. A2 and A3 were residing with CW1 at Adugodi. A1 never used to come home, he used to send money to A3. A2 and A3 used to instigate A1 to torture CW1. CW1 informed me that A1 has illicit relationship with some other lady at Mumbai. She came to know about the same, whenever she spoke to A1 over phone. A1 made galata with CW1 in the year 2010 and took away the children to Mumbai. The elder daughter of CW1 is residing at Mumbai with A1. The second son of CW1 is residing with her. CW1 has lodged complaint to the police regarding the harassment meted out by her at the hands of A1 to A3.

Cross Examination by Sri.SRH Advocate for A1 to A4:

The marriage of A1 with CW1 was performed as per the Hindu customs. For many years after the marriage, A1 and CW1 were residing happily at Mumbai. I have not gone to Mumbai to see or inquire about the illicit relationship of A1 with some other woman. I do not know the name and address of the woman with whom A1 has illicit relationship. CW1 informed me that A1 has illicit relationship with some other woman. It is false to suggest that A1 has no illicit relationship with any woman and I am deposing falsely at the instance of CW1. I was present when A1 took away the children by quarrelling with CW1. I have informed the police that I was present when galata took place between A1 and CW1. My husband is working in Police Department. My husband is residing with me. CW1 is residing nearby to my house, i.e., her house is situated two houses after my house. It is false to suggest that no galata has taken place in the year 2010 between A1 and CW1 as stated by me. It is false to suggest that A2 and A3 have not instigated A1 in any manner to harass CW1. It is false to suggest that A2 and A3 never resided with CW1. I do not know whether A1 used to transfer money to the account of CW1. I do not know whether I had given statement before the police about A1 taking away the children. It is false to suggest that though the accused have not harassed CW1 in any manner, at the instance of CW1, I am deposing falsely.

Re-examination: nil.

(Typed to my dictation in Open Court)
R.I.O & A.C.,
Sd/-
Judicial Magistrate First Class

2. Translate the following document to Kannada language: 15 Marks

This DEED OF SETTLEMENT executed on this the 10th day of December 2017 by R.Laxmana S/o Ramaiah, aged 65 years, residing at House No.6/2, 2nd Main, 3rd Cross, Hanumanthanagar, Rangapura, hereinafter referred to as the SETTLOR of the One Part;

TO AND IN FAVOUR OF

L.Somaraj S/o R.Laxmana, aged 35 years, residing at House No.6/2, 2nd Main, 3rd Cross, Hanumanthanagar, Rangapura, hereinafter referred to as the SETTLEE of the Other Part;

The term SETTLOR and SETTLEE whenever occurs shall mean and include their heirs, executors, legal representatives and assigns witnesseth as follows.

WHEREAS the vacant site more fully described in the schedule hereunder was purchased by SETTLOR herein through a sale deed dated 15.11.2015 executed by John D'Souza S/o Albert D'Souza registered as document No.834 of 2015-2016 of Book 1 on the file of the Sub Registrar of Rangapura and the SETTLOR herein has been in exclusive possession and enjoyment of the property till date.

WHEREAS the SETTLOR is the exclusive owner of the property morefully described in the Schedule and he has absolute right to dispose of the same as he wishes;

WHEREAS the SETTLOR out of natural love and affection he bears towards his son L.Somaraj, the SETTLEE herein has decided to settle the property morefully described in the schedule hereunder.

NOW THIS DEED OF SETTLEMENT WITNESSETH AS FOLLOWS;

THAT in pursuance of the aforesaid recitals and in consideration of love and affection, the SETTLOR bears towards the SETTLEE herein, the SETTLOR doth hereby settle the property morefully described in the schedule hereunder in favour of the SETTLEE herein with absolute rights.

THAT the SETTLOR further covenants that the property morefully described in the schedule hereunder can be enjoyed by the SETTLEE with full right of alienation.

THAT the SETTLOR further covenants that the property morefully described in the schedule hereunder is free from all encumbrances, charges, liens, mortgages, litigation, attachment, maintenance, lispendens, testamentary disposition, etc.,

THAT the SETTLOR further covenants that he has paid all the rates, taxes and other revenue out goings up to date in respect of the schedule property.

THAT the SETTLOR has this day handed over the vacant possession of the schedule property to the SETTLEE and the SETTLEE can enjoy the property as he wishes.

SCHEDULE

Vacant land bearing Sy.No.26, measuring 60 x 80 feet situated at Keri Oni, Amritha Halli, Rangapura within the limits of Sub-Registrar, Amrutha Halli.

In witness whereof, the SETTLOR has set his hand and Signature on the 10th day of December 2017.

Sd/-
SETTLOR

WITNESSES:

1.

2.

3. Translate the following Passage from a Judgment to Kannada language: 20 Marks

We make it clear that in any criminal case involving various offences punishable under different sections of Indian Penal Code in respect of cognizable and non-bailable offences as well as non-cognizable and bailable offences, if the accused is acquitted of the offences, the appeal against the order of acquittal in such an event also needs to be filed by the State through Public Prosecutor before the Sessions Court, in as much as "the criminal case" is only one. Though such criminal case may involve various punishing sections, the criminal case cannot be bifurcated. So also, as against an order of acquittal passed by the Magistrate in any criminal case, two appeals cannot be filed by the State, one against cognizable offences and another against non-cognizable offences. Hence, the appeal lies before the Sessions Court against the order of acquittal, in which the accused is acquitted of the offences, which are both cognizable as well as non-cognizable and bailable as well as non-bailable (as the matter on hand).

Hence, the appeal needs to be dismissed as not maintainable and accordingly, the same stands dismissed as not maintainable.

4. Translate the following deposition to English language: 15 Marks

ದಿನಾಂಕ 28.4.2015 ರಂದು ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :–

ನನಗೆ 1 ರಿಂದ 4 ಆರೋಪಿತರು ಗೊತ್ತಿದೆ. ತ್ಯಾಗರಾಜ ಕೋ-ಆಪರೇಟಿವ್ ಬ್ಯಾಂಕಿನಲ್ಲಿ ಪ್ರಧಾನ ಪ್ರಬಂಧಕರಾಗಿ ಕೆಲಸ ನಿರ್ವಹಿಸುತ್ತಿದ್ದ ಚಾ.ಸಾ.2 ಗೊತ್ತಿದೆ. ನಾನು 31.03.2001ರವರೆಗೆ ಸದರಿ ಬ್ಯಾಂಕಿನಲ್ಲಿ ಸಹಾಯಕ ಪ್ರಧಾನ ಪ್ರಬಂಧಕನಾಗಿ ಕೆಲಸ ನಿರ್ವಹಿಸಿದ್ದೆ. ನಮ್ಮ ಬ್ಯಾಂಕ್ ಗ್ರಾಹಕರಿಂದ ಅಗತ್ಯದ ದಾಖಲೆಗಳನ್ನು ಸ್ವೀಕರಿಸಿ ಅನೇಕ ಸಾಲಗಳನ್ನು ನೀಡಿದೆ. 1999ನೇ ವರ್ಷದಲ್ಲಿ ಒಬ್ಬ ಲೀಲಾವತಿ ನಮ್ಮ ಬ್ಯಾಂಕಿಗೆ ಬಂದು ನಾಲ್ಕು ಲಕ್ಷ ಸಾಲ ನೀಡಲು ಕೋರಿದಳು. ಅವಳ ಅರ್ಜಿ ಮೇರೆಗೆ ಅವಳಿಂದ ಮೂಲ ದಾಖಲೆಗಳನ್ನು ಪಡೆದುಕೊಂಡು ಅವಳಿಗೆ 2.5 ಲಕ್ಷ ರೂಪಾಯಿ ಸಾಲವನ್ನು ನಮ್ಮ ಬ್ಯಾಂಕ್ ನೀಡಿತ್ತು. ಸಾಲ ಪಡೆದ ನಂತರ ಸದರಿ ಲೀಲಾವತಿ ಕಂತುಗಳನ್ನು ಕಟ್ಟಲಿಲ್ಲ. ಸಾಲ ಮರುಪಾವತಿ ಮಾಡಲು ವಿಫಲವಾಗಿದ್ದರಿಂದ ಬ್ಯಾಂಕ್ ಲೀಲಾವತಿಗೆ ನೋಟೀಸು ನೀಡಿತ್ತು. ನೋಟೀಸು ಸ್ವೀಕರಿಸಿದ ನಂತರ ಚಾ.ಸಾ.1 ನಮ್ಮ ಬ್ಯಾಂಕಿಗೆ ಬಂದಳು ಮತ್ತು ಅವಳು ಸಾಲ ತೆಗೆದುಕೊಂಡಿಲ್ಲ ಎಂದು ಹೇಳಿದಳು. ಆ ನಂತರ ಸಾಲ ತೆಗೆದುಕೊಂಡ ಮಹಿಳೆ ಬರೆದುಕೊಟ್ಟ ದಾಖಲೆಗಳನ್ನು ತೋರಿಸಿದೆವು. ದಾಖಲೆಗಳಲ್ಲಿ ಇರುವ ಫೋಟೋ ಚಾ.ಸಾ.1 ರವರದು ಆಗಿರಲಿಲ್ಲ. ತದ ನಂತರ ನಾನು ಮತ್ತು ಚಾ.ಸಾ.2 ರವರು ದೂರು ನೀಡಲು ಪೋಲೀಸರನ್ನು ಭೇಟಿ ಮಾಡಿದೆವು. ಆವಾಗ ಚಾ.ಸಾ.1 ಪೋಲೀಸು ಠಾಣೆಯಲ್ಲಿ ಹಾಜರಿದ್ದರು ಮತ್ತು ಆಕೆ ಮೊದಲೇ ದೂರು ಕೊಟ್ಟಿದ್ದವಳು. ಚಾ.ಸಾ.1 ರವರು ಕೊಟ್ಟ ದೂರಿನ ಆಧಾರದ ಮೇರೆಗೆ ಪ್ರಕರಣ ದಾಖಲು ಮಾಡಿದರು. ಪೋಲೀಸರು ನನ್ನ ಹೇಳಿಕೆಯನ್ನು ಬರೆದುಕೊಂಡರು. ಈಗ ನಿಶಾನೆ ಪಿ.4 ನ್ನು ನೋಡುತ್ತಿದ್ದೇನೆ. ನಿ.ಪಿ.4 ರಲ್ಲಿ ಲಗತ್ತಿಸಿರುವ ಫೋಟೋ 2ನೇ ಆರೋಪಿಯದಾಗಿದೆ. ನಾನು ಈಗ ಸಾಲದ ದಾಖಲಾತಿಗಳನ್ನು ನೋಡುತ್ತಿದ್ದೇನೆ. ಅವುಗಳನ್ನು ಈಗಾಗಲೇ ಗುರುತಿಸಲಾಗಿದೆ. ದಾಖಲಾತಿಗಳಲ್ಲಿ ಇರುವ ಸಹಿಗಳು 2ನೇ ಆರೋಪಿ ನನ್ನ ಸಮಕ್ಷಮ ಲೀಲಾವತಿ ಎಂದು ಮಾಡಿದ್ದಾಗಿರುತ್ತದೆ. ನಮ್ಮ ಬ್ಯಾಂಕ್ 2ನೇ ಆರೋಪಿ ವಿರುದ್ಧ ಸಾಲ ವಸೂಲಾತಿ ಅರ್ಜಿ ಸಲ್ಲಿಸಿತ್ತು. ಆರೋಪಿಗಳಾದ ಪಾಪಣ್ಣ ಮತ್ತು ಮಹೇಶ ಸಾಕ್ಷಿದಾರರಾಗಿ ಸಹಿ ಮಾಡಿದ್ದಾರೆ. ಈ ಕೇಸಿನ ಘಟನೆಯ ಬಗ್ಗೆ ಮೇಲೆ ಹೇಳಿದ ಮೂವರ ಹೊರತುಪಡಿಸಿ ಯಾರೂ ನಮ್ಮ ಬ್ಯಾಂಕಿಗೆ ಬಂದಿಲ್ಲ.

ಪಾಟೀ ಸವಾಲು ಆರೋಪಿ ಪರ ವಕೀಲರಿಂದ:

ನಾನು ಸುಮಾರು 36 ವರ್ಷ ತ್ಯಾಗರಾಜ ನಗರ ಕೋ-ಆಪರೇಟಿವ್ ಬ್ಯಾಂಕಿನಲ್ಲಿ ಕೆಲಸ ಮಾಡಿದ್ದೇನೆ. ನಾನು ಬಿ.ಎ. ಡಿಗ್ರಿ ಮುಗಿಸಿದ್ದೇನೆ. ಘಟನೆ ನಡೆದಿದೆ ಎನ್ನುವ ದಿನಾಂಕದಂದು ನಾನು ಎಸ್.ಆರ್.ಕಾಲೋನಿಯ ಪ್ರಧಾನ ಕಛೇರಿಯಲ್ಲಿ ಸಹಾಯಕ ಪ್ರಧಾನ ಪ್ರಬಂಧಕನಾಗಿ ಕೆಲಸ ಮಾಡುತ್ತಿದ್ದೆನು. 1999ನೇ ವರ್ಷದಲ್ಲಿ ಸದರಿ ಬ್ಯಾಂಕಿಗೆ 6 ಶಾಖೆಗಳಿದ್ದವು. ಎಲ್ಲಾ ಶಾಖೆಗಳಿಗೆ ಪ್ರತ್ಯೇಕ ಶಾಖಾಪ್ರಬಂಧಕರಿದ್ದರು. ಲೀಲಾವತಿಯವರು 2ನೇ ಹಂತ. ಕೆ.ಆರ್.ರಸ್ತೆ ಶಾಖೆಯಲ್ಲಿ ಸಾಲಕ್ಕೆ ಅರ್ಜಿ ಸಲ್ಲಿಸಿದ್ದರು. ಆ ಸಮಯದಲ್ಲಿ ನಾನು 2ನೇ ಹಂತ ಕೆ.ಆರ್.ರಸ್ತೆಯ ಶಾಖೆಯಲ್ಲಿ ಪ್ರಬಂಧಕನಾಗಿ ಕೆಲಸ ಮಾಡುತ್ತಿರಲಿಲ್ಲ ಎಂದರೆ ನಿಜ. ಯಾರು ಸಾಲಕ್ಕೆ ಅರ್ಜಿ ಸಲ್ಲಿಸಿದ್ದರು ಮತ್ತು ಸಾಲದ. ಅರ್ಜಿ ಸಲ್ಲಿಸಲು ಕೆ.ಆರ್.ರಸ್ತೆ ಶಾಖೆಗೆ ಯಾರೆಲ್ಲ ಬಂದಿದ್ದರು ಎಂದು ನಾನು ಸ್ವತಃ ನೋಡಿಲ್ಲ ಎಂದರೆ ನಿಜ. ಸಂಬಂಧಪಟ್ಟ ಶಾಖೆಯ ಪ್ರಬಂಧಕರು ಸಾಲದ ಅರ್ಜಿ ಸ್ವೀಕೃತವಾದ ಕೂಡಲೇ ಅರ್ಜಿಯನ್ನು ಪ್ರಧಾನ ಕಛೇರಿಗೆ ಕಳುಹಿಸಿ ಕೊಡುತ್ತಾರೆ. ನಮ್ಮ ಪ್ರಧಾನ ಕಛೇರಿಯು ಸಂಬಂಧಪಟ್ಟ ಶಾಖೆಯಿಂದ ದಾಖಲಾತಿಗಳನ್ನು ಮಾತ್ರ ಸ್ವೀಕರಿಸುತ್ತದೆ ಎಂದರೆ ನಿಜ. ಪಕ್ಷಕಾರರು ದಾಖಲಾತಿಗಳ ಜೊತೆಗೆ ಪ್ರಧಾನ ಕಛೇರಿಗೆ ಬರುವುದಿಲ್ಲ ಎಂದರೆ ನಿಜ. ಪ್ರಧಾನ ಕಛೇರಿಯ ಅಧಿಕಾರಿಗಳು ಪರಿಶೀಲನೆಗೆ ಮತ್ತು ಮೌಲ್ಯಮಾಪನಕ್ಕೆ ಟಿಪ್ಪಣಿ ಹಾಕುತ್ತಾರೆ. ಇಂಜಿನಿಯರುಗಳು ಆಸ್ತಿಯ

ಮೌಲ್ಯಮಾಪನ ಮಾಡುತ್ತಾರೆ. ಕಡತವನ್ನು ಮೌಲ್ಯಮಾಪನಕ್ಕೆ ಉಲ್ಲೇಖಿಸಿದಾಗ ಇಂಜಿನಿಯರ್, ನಿರೀಕ್ಷಕರು ಮತ್ತು ನಿರ್ದೇಶಕರು ಸ್ಥಳಕ್ಕೆ ಭೇಟಿ ಕೊಡುತ್ತಾರೆ ಎಂದರೆ ನಿಜ. ಸಮಗ್ರ ತನಿಖೆ ಮಾಡಿದ ನಂತರ ಪ್ರಧಾನ ಕಛೇರಿಗೆ ವರದಿ ಸಲ್ಲಿಸುತ್ತಾರೆ ಎಂದರೆ ನಿಜ.

ಮರುವಿಚಾರಣೆ ಇಲ್ಲ.

(ನನ್ನ ಉತ್ತರಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)
ಓ. ಹೇ. ಕೇ. ಸ. ಇದೆ
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ
ವಿಜಯಪುರ

5. Translate the following document to English language: 15 Marks

ಸನ್ ಸಾವಿರದ ಒಂಬೈನೂರ ಒಂಬತ್ತೊಂದನೇ ಇಸವಿ ನವೆಂಬರ್ ಮಾಹೆ ತಾರೀಖು 18ರಲ್ಲಿ ಮೂಡಗಿರಿ ತಾಲೂಕು ಗೋಣಿಕೊಪ್ಪ ಹೋಬಳಿ, ಮಕ್ಕಿ ಗ್ರಾಮದಲ್ಲಿ ವಾಸವಾಗಿರುವ ರಾಮಣ್ಣನವರ ಮಗ ಸುಮಾರು ಐವತ್ತೆರಡು ವರ್ಷ ವಯಸ್ಸಿನ ನಾರಾಯಣ ಒಂದನೇ ಪಾರ್ಟಿಯಾಗಿಯೂ.

ಇವರ ಖಾಸಾ ಮಕ್ಕಳಾದ ಒಂದನೇ ಸುಮಾರು ಇಪ್ಪತ್ತಾರು ವರ್ಷ ವಯಸ್ಸಿನ ಎನ್.ಶಂಕರ ಎರಡನೇ ಪಾರ್ಟಿಯಾಗಿಯೂ. ಎರಡನೇ ಮಗ ಸುಮಾರು ಇಪ್ಪತ್ತೆರಡು ವರ್ಷ ವಯಸ್ಸಿನ ಎನ್.ಗೋಪಾಲ ಮೂರನೇ ಪಾರ್ಟಿಯಾಗಿಯೂ ಮಾಡಿಕೊಂಡು ಪಾಲುಪಾರೀಖತ್ತು ಪತ್ರದ ಕ್ರಮವೇನೆಂದರೆ.

1. ನಾವು ಮೂರ್ವರೂ ಹಿಂದೂ ಅವಿಭಕ್ತ ಕುಟುಂಬದವರಾಗಿದ್ದು ಈ ಹಿಂದೆಯೇ ಪಂಚಾಯಿತರು ಮತ್ತು ಹಿತೈಷಿಗಳನ್ನು ಸೇರಿಸಿಕೊಂಡು ನಮ್ಮ ಕುಟುಂಬದ ಸಮಸ್ತ ಸ್ಥಿರಾಸ್ತಿಗಳನ್ನು ಹಿಸ್ಸೆ ಮಾಡಿಕೊಂಡು ಜುಬಾನೆ ಅನುಭವಿಸುತ್ತಿದ್ದು, ಸದರಿ ಜುಬಾನೆ ಹಿಸ್ಸೆಯನ್ನು ಈ ದಿವಸ ಬೇರೆ ಬೇರೆ ಖಾತೆ ಮಾಡಿಸಿಕೊಂಡು ವ್ಯವಹಾರವನ್ನು ಮುಂದುವರಿಸಬೇಕೆಂಬ ಇರಾದೆಯಿಂದ ಕ್ರಮವರಿತು 'ಎ', 'ಬಿ' ಮತ್ತು 'ಸಿ' ಎಂದು ಮೂರು ತಪಶೀಲು ಮಾಡಿ, ಒಂದನೇ ಪಾರ್ಟಿ ನಾರಾಯಣ ರವರಿಗೆ 'ಎ' ತಪಶೀಲು ಸ್ವತ್ತುಗಳನ್ನು, ಎರಡನೇ ಪಾರ್ಟಿ ಎನ್.ಶಂಕರನಿಗೆ 'ಬಿ' ತಪಶೀಲು ಸ್ವತ್ತುಗಳನ್ನು, ಮೂರನೇ ಪಾರ್ಟಿ ಎನ್.ಗೋಪಾಲನಿಗೆ 'ಸಿ' ತಪಶೀಲು ಸ್ವತ್ತುಗಳನ್ನು ವಿಭಾಗ ಮಾಡಿಕೊಂಡಿರುವುದಾಗಿ ದೃಢಪಡಿಸಿರುತ್ತೇವೆ.

2. ನಾವುಗಳು ತಪಶೀಲುಗಳಿಗನುಸರಿಸಿ ನಮ್ಮ ನಮ್ಮ ಹಿಸ್ಸೆಗೆ ಬಂದಿರತಕ್ಕ ಸ್ಥಿರ ಆಸ್ತಿಗಳನ್ನು ನಮ್ಮ ನಮ್ಮ ಸ್ವಾಧೀನಕ್ಕೆ ವಹಿಸಿಕೊಂಡಿದ್ದಾಗಿರುತ್ತದೆ.

3. ಇವುಗಳನ್ನು ಹೊರತು ಪಡಿಸಿ ಕುಟುಂಬದಲ್ಲಿ ನಾವು ಹಿಸ್ಸೆ ಮಾಡಿಕೊಳ್ಳಬೇಕಾಗಿರುವ ಮತ್ತೆ ಯಾವುದೇ ಸ್ಥಿರ ಆಸ್ತಿ ಇರುವುದಿಲ್ಲ.

4. ಇನ್ನು ಮುಂದೆ ನಮ್ಮ ನಮ್ಮ ತಪಶೀಲುಗಳ ಪ್ರಕಾರ ಖಾತೆ ಮಾಡಿಕೊಂಡು ನಮ್ಮ ನಮ್ಮ ಇಚ್ಛಾನುಸಾರ ಪೂರ್ಣ ಮಾಲೀಕರಾಗಿ ಅನುಭವಿಸುವವರಾಗಿರುತ್ತೇವೆ.

ಈ ವಿಭಾಗ ಪತ್ರವನ್ನು ನಾವುಗಳು ಓದಿ ನೋಡಿಕೊಂಡು ಸರಿಯಾಗಿರುತ್ತದೆಂದು ನಮ್ಮಗಳ ಆತ್ಮ ಸಂತೋಷದಿಂದ ಒಪ್ಪಿ ರುಜು ಮಾಡಿರುತ್ತೇವೆಂದು ಮಾಡಿಕೊಂಡ ವಿಭಾಗ ಪತ್ರ.

ತಪಶೀಲು

'ಎ', 'ಬಿ' ಮತ್ತು 'ಸಿ'

ಸಾಕ್ಷಿಗಳು:
1.
2.
3.

ಸಹಿಗಳು:
1.
2.
3.

6. Translate the following passage from a judgment to English language: 20 Marks

ಮೊದಲ ಅಪೀಲು ನ್ಯಾಯಾಲಯ ಅಧಿವಿಚಾರಣಾ ನ್ಯಾಯಾಲಯದ ತೀರ್ಮು ಹಾಗೂ ಡಿಕ್ರಿಯನ್ನು ರದ್ದುಪಡಿಸಿ. ಆ ಮೂಲಕ ವಾದಿಯ ಪರವಾಗಿ ವಿವೇಚನೆಯನ್ನು ಬಳಸದೆ ಅಪೀಲುದಾರ/ಪ್ರತಿವಾದಿಗೆ ಒಪ್ಪಂದದ ನಿರ್ದಿಷ್ಟ ಪರಿಹಾರವನ್ನು ನಿರಾಕರಿಸುವ ಮೂಲಕ ದಾವೆಯನ್ನು ವಜಾಮಾಡುವುದು ಸರಿಯಾದ ಕ್ರಮವೇ ಎಂಬುದನ್ನು ವಿವೇಚಿಸಬೇಕಾಗಿರುವುದು ನಂತರದ ಪ್ರಶ್ನೆಯಾಗಿರುತ್ತದೆ. ಈ ಪ್ರಶ್ನೆಗೆ, ಮೊದಲ

ಅಪೀಲು ನ್ಯಾಯಾಲಯವು, ತಾನು ಎತ್ತಿರುವ ಅಂಶ ಸಂ.2 ಹಾಗು 3ಕ್ಕೆ ಪರಿಹಾರವನ್ನು ನೀಡಲು ನಿರಾಕರಿಸಿ ಉತ್ತರಿಸಿರುವ ಆಧಾರವನ್ನು ಅವಲೋಕಿಸುವ ಸರಳ ಕಾರಣದಿಂದಾಗಿಯೇ ದೀರ್ಘವಾಗಿ ಉತ್ತರಿಸುವ ಅವಶ್ಯಕತೆ ಇರುವುದಿಲ್ಲ. ಅಧಿನಿಯಮದ 20ನೇ ಕಲಂ ಹೇಳುವುದೇನೆಂದರೆ ಮಾಡುವ ಕಾರ್ಯವು ಕಾನೂನು ಬದ್ಧವಾಗಿದೆಯೆಂಬ ಒಂದೇ ಕಾರಣಕ್ಕೆ ನಿರ್ದಿಷ್ಟ ಪಾಲನೆಯ ಡಿಕ್ರಿಯನ್ನು ನೀಡಲೇ ಬೇಕೆಂಬುದಕ್ಕೆ ಬದ್ಧವಾಗಿರಬೇಕಿಲ್ಲ. ಹಾಗೆಯೇ ನ್ಯಾಯಾಲಯದ ವಿವೇಚನೆಯನ್ನು ಬಳಸುವುದು ನಿರಂಕುಶವಾಗಿರತಕ್ಕದ್ದಲ್ಲ. ಆದರೆ ನ್ಯಾಯಿಕ ತತ್ವಗಳು ದಾರಿ ತೋರಿದ ರೀತಿಯಲ್ಲಿ ಸಮರ್ಥ ಹಾಗೂ ಯುಕ್ತವಾಗಿರಬೇಕು ಹಾಗೂ ಅಪೀಲು ನ್ಯಾಯಾಲಯವು ಮಾಡುವ ತಿದ್ದುಪಡಿಗೆ ಹೊಂದಿಕೊಳ್ಳುವಂತಿರಬೇಕು. ಪ್ರಸ್ತುತ ಪ್ರಕರಣಕ್ಕೆ ಅನ್ವಯವಾಗುವಂತೆ ಅಧಿನಿಯಮದ 20ನೇ ಕಲಂನಲ್ಲಿ ಸ್ಪಷ್ಟವಾಗಿ ನಿರೂಪಿಸಿದಂಥ ಯಾವುದೇ ಸಂದರ್ಭಗಳು ಇಲ್ಲದಿರುವಲ್ಲಿ ಮೊದಲ ಅಪೀಲು ನ್ಯಾಯಾಲಯವು ವಾದಪತ್ರದಲ್ಲಿ ನಿರ್ದಿಷ್ಟವಾಗಿ "ಒಪ್ಪಿಗೆ ಹಾಗೂ ಸಮ್ಮತಿ" ಎಂಬ ಪದಗಳು ಇಲ್ಲವೆಂಬ ಕಾರಣ ಮಾತ್ರದಿಂದಲೇ ವಾದಿಯ ಹೆಸರಿನಲ್ಲಿ ವಿವೇಚನೆ ಬಳಸದೆ ಮುಂದುವರೆದಿದೆ. ನನ್ನ ಪ್ರಕಾರ ಮೊದಲ ಅಪೀಲು ನ್ಯಾಯಾಲಯದ ಯೋಚನಾ ಕ್ರಮ ಸರಿಯಾದುದಾಗಿರುವುದಿಲ್ಲ. ಮೇಲೆ ಉಲ್ಲೇಖಿಸಿದ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಮುಗಳು ವಾದಪತ್ರಗಳನ್ನು ಹೇಗೆ ಓದಬೇಕು ಹಾಗು ಅರ್ಥೈಸಿಕೊಳ್ಳಬೇಕೆಂದು ನಿಖರವಾಗಿ ತಿಳಿಸುತ್ತದೆ. ವಾಸ್ತವವಾಗಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಮೊಫಿಸಿಲ್ ದಾವಾಪತ್ರ, ಪ್ರತಿದಾವಾಪತ್ರಗಳನ್ನು ಅರ್ಥೈಸಿಕೊಳ್ಳುವ ಪ್ರಕರಣವಾಗಿದ್ದಾಗ, ಅಲ್ಲಿ ಆ ದಾವಾಪತ್ರ, ಪ್ರತಿದಾವಾ ಪತ್ರಗಳ ಬಗ್ಗೆ ಹೆಚ್ಚಿನ ಉದಾರವಾದ ರಚನೆಯನ್ನು ಹೊಂದಿರಲೇಬೇಕೆಂದು ಸಾಕಷ್ಟು ಪ್ರಕರಣಗಳಲ್ಲಿ ಅಭಿಪ್ರಾಯಪಟ್ಟಿರುತ್ತದೆ. ಆದ್ದರಿಂದ, ಕಾನೂನಿನ ಸಾರಭೂತವಾದ ಪ್ರಶ್ನೆ ಸಂ.(ii)ಕ್ಕೆ ಸಹ, ವಾದಿಯ ಕಾನೂನು ಸಮ್ಮತ ವಾರಸುದಾರರು, ದಿನಾಂಕ 20.02.2003ರಂದಿನ ಮಾರಾಟದ ಒಪ್ಪಂದ ಪತ್ರದ ಮೇರೆಗೆ ನಿರ್ದಿಷ್ಟ ಪಾಲನೆಯ ಪರಿಹಾರಕ್ಕೆ ಹಕ್ಕುಳ್ಳವರಾಗಿರುತ್ತಾರೆಂದು ಅಭಿಪ್ರಾಯಪಡುವ ಮೂಲಕ ಅಪೀಲುದಾರರ ಪರವಾಗಿ ಉತ್ತರಿಸಬೇಕಾಗಿರುತ್ತದೆ.